ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಮಹಮ್ಮದ್ ಯೂಸುಫ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. ಮಾನ್ವಿ, ಮತ್ತು ಶ್ರೀ ನರಸಪ್ಪ, ಹಿಂದಿನ ಕಾರ್ಯದರ್ಶಿ, ಗ್ರಾ.ಪಂ. ಅರೋಲಿ, ಮಾನ್ವಿ ತಾಲ್ಲೂಕು ಇವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆ- ಅಂತಿಮ ಆದೇಶದ ಬಗ್ಗೆ.

ಓದಲಾಗಿದೆ: 1. ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಅ.ಸ.ಪತ್ರ ಸಂಖ್ಯೆ: ಕಂಪ್ಲೆಂಟ್:ಉಪಲೋಕ್: ಜಿಎಲ್‌ಬಿ :403:2007: ಎಆರ್‌ಇ-6 ದಿನಾಂಕ: 17-05-2012, 01-10-2012.

2. ಸರ್ಕಾರದ ಆದೇಶ ಸಂ. ಗ್ರಾಅಪ 117 ವಿಸೇಬಿ 2012, ದಿನಾಂಕ: 15-12-2012.

3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ.ಲೋಕ್/ಎಆರ್‌ಇ-1/ಇನ್‌ಕ್ಯೂ-521/2012, ದಿನಾಂಕ: 17-6-2015.

4. 2ನೇ ಕಾರಣ ಕೇಳುವ ನೋಟಿಸು ಸಂಖ್ಯೆ: ಗ್ರಾಅಪ 159 ವಿಸೇಬಿ 2010, ದಿನಾಂಕ: 24.07.2015

5. ಅನಧಿಕೃತ ಟಿಪ್ಪಣಿ ದಿನಾಂಕ: 24.07.2015.

----------

<u>ಪ್ರಸ್ತಾವನೆ:</u>

ಶ್ರೀ ವೀರೇಶ್, ಅರೋಲಿ ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರು ಅರೋಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕರ ವಸೂಲಿ ಹಣವನ್ನು ಗ್ರಾಮ ಪಂಚಾಯತಿ ಖಾತೆಗೆ ಜಮಾ ಮಾಡದೆ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿ, ಶ್ರೀ ಮಹಮ್ಮದ್ ಯೂಸುಫ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾನ್ವಿ, ಮತ್ತು ಶ್ರೀ ನರಸಪ್ಪ, ಕಾರ್ಯದರ್ಶಿ, ಗ್ರಾಮ ಪಂಚಾಯತಿ, ಅರೋಲಿ, ಮಾನ್ವಿ ತಾಲ್ಲೂಕು ಹಾಗೂ ಶ್ರೀ ಜಂಬಣ್ಣ, ಲೆಕ್ಕ ಅಧೀಕ್ಷಕರು, ತಾಲ್ಲೂಕು ಪಂಚಾಯತಿ, ಮಾನ್ವಿ ಇವರುಗಳ ವಿರುದ್ಧ ತನಿಖೆಯನ್ನು ಕೈಗೊಳ್ಳುವಂತೆ ಲೋಕಾಯುಕ್ತ ಸಂಸ್ಥೆಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನ ಬಗ್ಗೆ ಲೋಕಾಯುಕ್ತ ಸಂಸ್ಥೆಯು ತನಿಖೆಯನ್ನು ಕೈಗೊಂಡು ಅರೋಲಿ ಗ್ರಾಮ ಪಂಚಾಯತಿಯಿಂದ ವಸೂಲಿ ಮಾಡಿದ ರೂ. 1,09,550/- ಗಳನ್ನು ಶ್ರೀ ನರಸಪ್ಪ, ಕಾರ್ಯದರ್ಶಿ, ಗ್ರಾಮ ಪಂಚಾಯತಿ, ಅರೋಲಿ, ಮಾನ್ವಿ ತಾಲ್ಲೂಕು ಹಾಗೂ ಶ್ರೀ ಜಂಬಣ್ಣ, ಲೆಕ್ಕ ಅಧೀಕ್ಷಕರು, ತಾಲ್ಲೂಕು ಪಂಚಾಯತಿ, ಮಾನ್ವಿ ಇವರುಗಳು ದುರುಪಯೋಗ ಪಡಿಸಿಕೊಂಡಿದ್ದು, ಅವರುಗಳ ವಿರುದ್ಧ ಕ್ರಮ ಕೈಗೊಳ್ಳಲು ಶ್ರೀ ಮಹಮ್ಮದ್ ಯೂಸುಫ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಮಾನ್ವಿ ಇವರು ವಿಫಲರಾಗಿರುವುದರಿಂದ ಈ ಕೆಳಕಂಡ ಅಧಿಕಾರಿ/ ನೌಕರರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಲು ಉಪ ಲೋಕಾಯುಕ್ತರ-1 ರವರು ಶಿಫಾರಸ್ಸು ಮಾಡಿರುವುದಾಗಿ ಅಪರ ನಿಬಂಧಕರು ವಿಚಾರಣೆಗಳು-6 ಇವರು ಮೇಲೆ ಓದಲಾದ ಕ್ರ.ಸಂ(1)ರ ದಿನಾಂಕ: 17-05-2012ರ ಪತ್ರದಲ್ಲಿ ಕೋರಿರುತ್ತಾರೆ.

1) ಶ್ರೀ ಮಹಮ್ಮದ್ ಯೂಸುಫ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾನ್ವಿ,
2) ಶ್ರೀ ನರಸಪ್ಪ, ಅಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯತಿ, ಅರೋಲಿ, ಮಾನ್ವಿ ತಾಲ್ಲೂಕು
3) ಶ್ರೀ ಜಂಬಣ್ಣ, ಲೆಕ್ಕ ಅಧೀಕ್ಷಕರು, ತಾಲ್ಲೂಕು ಪಂಚಾಯತಿ, ಮಾನ್ವಿ

ಕರ್ನಾಟಕ ಉಪ ಲೋಕಾಯುಕ್ತ-1 ರವರ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಮೇಲ್ಕಂಡ ಅಧಿಕಾರಿ/ನೌಕರರುಗಳ ವಿರುದ್ಧ ಮಾಡಿರುವ ಆರೋಪಗಳಲ್ಲಿ ಸತ್ಯಾಂಶವಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, ಅವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ಪ್ರಕರಣವನ್ನು ಮೇಲೆ ಓದಲಾದ ಕ್ರ.ಸಂ(2)ರ ದಿನಾಂಕ: 15-12-2012 ಆದೇಶದಲ್ಲಿ ಉಪ ಲೋಕಾಯುಕ್ತ-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ(3)ರ ದಿನಾಂಕ:17-6-2015ರಂದು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ 3 ಆಪಾದಿತ ಅಧಿಕಾರಿ/ ನೌಕರರ ಪೈಕಿ ಶ್ರೀ ಮಹಮ್ಮದ್ ಯೂಸುಫ್, ಅಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾನ್ವಿ, (ಪ್ರಸ್ತುತ ಉಪ ಕಾರ್ಯದರ್ಶಿ, ಜಿ.ಪಂ. ರಾಯಚೂರು.) ಇವರ ವಿರುದ್ಧದ ಆರೋಪವು ಸಾಬೀತಾಗಿರುವುದಿಲ್ಲವೆಂದು ಹಾಗೂ ಶ್ರೀ ನರಸಪ್ಪ, ಕಾರ್ಯದರ್ಶಿ, ಗ್ರಾ.ಪಂ. ಅರೋಲಿ, ಮಾನ್ವಿ ತಾಲ್ಲೂಕು ಇವರ ವಿರುದ್ಧದ ಆರೋಪ ಭಾಗಶ: ಮತ್ತು ಶ್ರೀ ಜಂಬಣ್ಣ, ಲೆಕ್ಕ ಅಧೀಕ್ಷಕರು, ತಾ.ಪಂ. ಮಾನ್ವಿ ಇವರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆ. ಆದ್ದರಿಂದ ಶ್ರೀ ನರಸಪ್ಪ, ಹಿಂದಿನ ಕಾರ್ಯದರ್ಶಿ, ಗ್ರಾ.ಪಂ. ಅರೋಲಿ, ಮಾನ್ವಿ ತಾಲ್ಲೂಕು ಇವರ ಕರ್ತವ್ಯ ಲೋಪಕ್ಕೆ ಸಂವಾದಿಯಾಗಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957ರ ನಿಯಮ 8(iii)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ನೌಕರರ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತಪರಿಣಾಮ ರಹಿತವಾಗಿ ಒಂದು ತಿಂಗಳ ಅವಧಿಯವರೆಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಮತ್ತು ಶ್ರೀ ಜಂಬಣ್ಣ, ಲೆಕ್ಕ ಅಧೀಕ್ಷಕರು, ತಾ.ಪಂ. ಮಾನ್ವಿ ಇವರ ಕರ್ತವ್ಯ ಲೋಪಕ್ಕೆ ಸಂವಾದಿಯಾಗಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957ರ ನಿಯಮ 8(iii)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ನೌಕರರ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತಪರಿಣಾಮ ರಹಿತವಾಗಿ 6 ತಿಂಗಳ ಅವಧಿಯವರೆಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಂ ಸಂಖ್ಯೆ:4ರ ದಿನಾಂಕ: 24.07.2015 ರಂದು ವಿಚಾರಣಾ ವರದಿಯ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟಿಸನ್ನು ಜಾರಿಮಾಡಲಾಗಿದ್ದು, ಸದರಿ ನೋಟಿಸಿಗೆ ಆಪಾದಿತ ಅಧಿಕಾರಿಯು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ ಇವರ ಲಿಖಿತ ಹೇಳಿಕೆ ಏನೂ ಇಲ್ಲವೆಂದು ಪರಿಗಣಿಸಿ, ವಿಚಾರಣಾ ವರದಿಯನ್ನು ಆಧರಿಸಿ, ದಂಡನೆಯನ್ನು ವಿಧಿಸಲು ತೀರ್ಮಾನಿಸಲಾಗಿದೆ.

ಪ್ರಕರಣದಲ್ಲಿ ಭಾಗಿಯಾಗಿರುವ, ಶ್ರೀ ಜಂಬಣ್ಣ ಲೆಕ್ಕಾಧೀಕ್ಷಕರು ಇವರು ಮೂಲತ: ರಾಜ್ಯ ಲೆಕ್ಕ ಪತ್ರ ಇಲಾಖೆಯ ನೌಕರರಾದ ಕಾರಣ ಸದರಿಯವರಿಗೆ ಸಂಬಂಧಪಟ್ಟಂತೆ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯಕ್ತ ಬೆಂಗಳೂರು, ಇವರ ದಿನಾಂಕ: 28.04.2015ರ ಶಿಫಾರಸ್ಸಿನಂತೆ ಕ್ರಮವಹಿಸಲು ಪ್ರಸ್ತಾವನೆಯನ್ನು ಮೇಲೆ ಓದಲಾದ ದಿನಾಂಕ: 24.07.2015ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ.

ಪ್ರಕರಣದಲ್ಲಿ ಮಾನ್ಯ ಉಪ ಲೋಕಾಯುಕ್ತರವರು ತಮ್ಮ ಪತ್ರದಲ್ಲಿ ಶಿಫಾರಸ್ಸು ಮಾಡಿರುವಂತೆ 2ನೇ ಆಪಾದಿತರಾದ ಶ್ರೀ ನರಸಪ್ಪ, ಹಿಂದಿನ ಗ್ರಾ.ಪಂ. ಕಾರ್ಯದರ್ಶಿ ಅರೋಲಿ, ಇವರ ವಿರುದ್ಧದ ಆರೋಪವು ಮೇಲ್ನೋಟಕ್ಕೆ ಗಂಭೀರ ಸ್ವರೂಪದ್ದಾಗಿ ಕಂಡು ಬಂದಿದ್ದರೂ ಸಹ ಸದರಿ ಆರೋಪವನ್ನು ಸಾಬೀತುಪಡಿಸಬಹುದಾದ ದಾಖಲೆಗಳಾದ ನಗದು ಪುಸ್ತಕ, ರೆಮಿಸ್ಟನ್ಸ್ ರಿಜಿಸ್ಟರ್, ಬ್ಯಾಂಕ್ ಪಾಸ್ ಪುಸ್ತಕ, ಚಲನ್ ಇತ್ಯಾದಿಗಳು ಲಭ್ಯವಿಲ್ಲದ ಕಾರಣ ಸದರಿ ಆರೋಪಗಳನ್ನು ಗಂಭೀರ ಸ್ವರೂಪದಲ್ಲಿ ಪರಿಗಣಿಸಿ ದಂಡನೆ ವಿದಿಸುವುದು ಸಮಂಜಸವಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ

ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 159 ವಿಸೇಚಿ 2015, ಬೆಂಗಳೂರು, ದಿನಾಂಕ: 29-02-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಮೊಹಮ್ಮದ್ ಯೂಸುಫ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಮಾನ್ವಿ, ಇವರ ವಿರುದ್ಧ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿಲ್ಲದ ಕಾರಣ, ಸದರಿಯವರನ್ನು ದೋಷಮುಕ್ತಗೊಳಿಸಿ ಆದೇಶಿಸಿದೆ.

ಶ್ರೀ ನರಸಪ್ಪ, ಹಿಂದಿನ ಕಾರ್ಯದರ್ಶಿ, ಅರೋಲಿ ಗ್ರಾಮ ಪಂಚಾಯತಿ, ಮಾನ್ವಿ ತಾಲ್ಲೂಕು ಪಂಚಾಯತಿ, ಇವರ ವಿರುದ್ಧ ಸಾಬೀತಾದ ಆರೋಪಗಳ ಗಂಭಿರತೆಗೆ ಅನುಗುಣವಾಗಿ, ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು 6 ತಿಂಗಳ ಅವಧಿಯವರೆಗೆ ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

1/3/2016

(ಎಸ್.ರಂಗನಗೌಡ),
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, (ಎ&ಇ) ಪಾರ್ಕ್ ಹೌಸ್, ಕರ್ನಾಟಕ, ಬೆಂಗಳೂರು.
2. ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತರ ಕಛೇರಿ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಯಚೂರು.
4. ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಯಚೂರು ಇವರ ಮುಖಾಂತರ
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) / ಜಂಟಿ ಕಾರ್ಯದರ್ಶಿ (ಆಡಳಿತ-2), ಗ್ರಾ.ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
6. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ. & ಪಂ.ರಾಜ್ ಇಲಾಖೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.